<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.</u>

**ಸಿ.ಸಿ. ಸಂಃ 1175/2019**

| | | |
|---|---|---|
| ಸಾಕ್ಷಿಯ ಹೆಸರುಃ | ಎಂ.ಡಿ.ರಘು | ಫ್ರಾಸಾಃಃ 10 |
| ತಂದೆಯ ಹೆಸರುಃ | ಎಂ.ಪಿ.ದಾಸೇಗೌಡ | ಚಾಸಾಃಃ 2 |
| ವಯಸ್ಸುಃ | 60 ವರ್ಷ | ಪ್ರಮಾಣೀಕರಿಸಿದ ದಿಃ 06.11.2025 |
| ಉದ್ಯೋಗಃ | ನಿವೃತ್ತ ಅಭಿಯೋಗ ಉಪ ನಿರ್ದೇಶಕರು | |
| ವಾಸ ಸ್ಥಳಃ | ಡೋರ್ ನಂ.459, ಎಂ.ಎಸ್.ರಾಮಯ್ಯ ಲೇಔಟ್, ಮೈಸೂರು. | |

<u>ಮುಖ್ಯ ವಿಚಾರಣೆಃ ಸಸಅ ರಿಂದಃ</u>

1. ಚಾಸಾ -1 ನನ್ನ ತಾಯಿ. ಆರೋಪಿ ನನ್ನ 2 ನೇ ಸಹೋದರ.

2. ಮಾಲಗಿ ಗ್ರಾಮದ ಸ.ನಂ.67/7 ರ 3 ಎಕರೆ ಜಮೀನನ್ನು ಮೂಲತಃ ನನ್ನ ತಂದೆ ಎಂ.ಪಿ.ದಾಸೇಗೌಡರಿಗೆ ದರಖಾಸ್ತು ಮೂಲಕ ಮಂಜೂರಾಗಿದ್ದು ನನ್ನ ತಂದೆ ಅವರ ಜೀವಿತ ಕಾಲದಲ್ಲಿ ತಂಬಾಕು ಮಂಡಳಿಯ ಪರವಾನಿಗೆ ಮೇರೆಗೆ 13*13 ಅಳತೆಯ 3 ಬ್ಯಾರನ್ ಮನೆಗಳನ್ನು ನಿರ್ಮಿಸಿ ಆ ಪ್ರದೇಶದಲ್ಲಿ ತೆಂಗು ಮತ್ತು ಅಡಿಕೆ ಗಿಡಗಳನ್ನು ನೆಟ್ಟಿದ್ದರು.

3. ನನ್ನ ತಂದೆ 2018 ರಲ್ಲಿ ಮೃತಪಟ್ಟಿರುತ್ತಾರೆ. ಆ ಪೂರ್ವದಲ್ಲಿ ಆ ಜಮೀನಿನ ಉತ್ತರ ದಿಕ್ಕಿನ 1 ಎಕರೆ 20 ಗುಂಟೆ ಪ್ರದೇಶವನ್ನು ಮೌಖಿಕ ವಿಭಾಗದ ಮೇರೆಗೆ ನನ್ನ ವಶಕ್ಕೆ ಕೊಡಲಾಗಿತ್ತು. ನಾನು ಅಭಿಯೋಜನಾಧಿಕಾರಿಯಾಗಿ ಹೊರ ಜಿಲ್ಲೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದರಿಂದ ನನ್ನ ತಂದೆಯವರು ಆ ಜಮೀನಿನ ಉಸ್ತುವಾರಿ ಮಾಡುತ್ತಿದ್ದರು. ಹೀಗಿರುವಾಗ ಕುಟುಂಬದಲ್ಲಿ ಬಿನ್ನಾಭಿಪ್ರಾಯವುಂಟಾಗಿ ನನ್ನ ಹಿರಿಯ ಸಹೋದರ ಎಂ.ಡಿ.ಚಂದ್ರೇಗೌಡರಿಗೆ ಆ ಜಮೀನನ್ನು ನೊಂದಾಯಿತ ಕ್ರಯಪತ್ರ ಮೇರೆಗೆ ಮಾರಾಟ ಮಾಡಿದ್ದರು.

4. ನನಗೆ ನೀಡಿದ ಹಿಸ್ಸೆ ಜಮೀನಿನಲ್ಲಿ ನಾನು ಅಭಿವೃದ್ಧಿಪಡಿಸಿದ್ದರಿಂದ ಮತ್ತು ಪಂಚಾಯತಿದಾರರ ಮಧ್ಯಸ್ಥಿಕೆ ಮೇರೆಗೆ ನನ್ನ ಹಿರಿಯ ಸಹೋದರನಿಂದ 1 ಎಕರೆ 20 ಗುಂಟೆ ಜಮೀನನ್ನು ನೊಂದಾಯಿತ ಕ್ರಯ ಕರಾರಿನ ಮೇರೆಗೆ ಪುನಃ ನನ್ನ ವಶಕ್ಕೆ ಪಡೆದುಕೊಂಡೆ.

5. ಆ ಕಾಲದಲ್ಲಿ ಶುದ್ಧ ಕ್ರಯಪತ್ರವನ್ನು ನೊಂದಣಿ ಮಾಡಲು 11 ಎ ಪ್ರಮಾಣ ಪತ್ರದ ಅಗತ್ಯ ಇದ್ದರಿಂದ , ಶುದ್ಧ ಕ್ರಯಪತ್ರವನ್ನು ಪಡೆಯಲು ಸಾಧ್ಯವಾಗಲಿಲ್ಲ. ಆ ಜಮೀನನ್ನು ನನ್ನ ವಶಕ್ಕೆ ಪಡೆದ ನಂತರ ಮೇಲೆ ಹೇಳಿದ 3 ಬ್ಯಾರನ್ ಮನೆಗಳು ಶಿಥಿಲವಾಗಿ ಬಿದ್ದಿದ್ದು ಅವುಗಳ ಪೈಕಿ ಉತ್ತರ ದಿಕ್ಕಿನ 2

ಬ್ಯಾರನ್ ಮನೆಗಳನ್ನು ಪುನಃ ನಿರ್ಮಾಣ ಮಾಡಿ ದಕ್ಷಿಣ ದಿಕ್ಕಿನ ಒಂದು ಬ್ಯಾರನ್ ಮನೆಯು ಶಿಥಿಲವಾಗಿ ಬಿದ್ದಿದ್ದು ಅದನ್ನು ದುರಸ್ತಿ ಮಾಡಲಾಗದ ಕಾರಣ ಅಲ್ಲಿ ಬಿದ್ದಿದ್ದ ಹೆಂಚು ಹಾಗೂ ಇತ್ಯಾದಿ ವಸ್ತುಗಳನ್ನು ಹೊರತೆಗೆದು ಹಾಕಲು ಮುದ್ದನಹಳ್ಳಿ ಗ್ರಾಮದ ಮಹೇಂದ್ರ ಮತ್ತು ಇತರರನ್ನು ಕೂಲಿ ಕಾರ್ಮಿಕರಾಗಿ ನೇಮಕ ಮಾಡಿ ದಿಃ 20.02.2019 ರಂದು ಅಲ್ಲಿ ಬಿದ್ದಿದ್ದ ತ್ಯಾಜ್ಯ ವಸ್ತುಗಳನ್ನು ತೆಗೆದು ಹಾಕುವಂತೆ ತಿಳಿಸಿದ ಮೇರೆಗೆ ಆ ಕೂಲಿ ಕಾರ್ಮಿಕರು ಆ ಕೆಲಸವನ್ನು ಮಾಡುತ್ತಿದ್ದಾಗ, ನ್ಯಾಯಾಲಯದ ಮುಂದಿರು ನನ್ನ ಸಹೋದರ ಗೋವಿಂದೇಗೌಡ ನನ್ನ ಜಮೀನಿನಲ್ಲಿ ಪ್ರವೇಶ ಮಾಡಿ ಮದ್ದನಹಳ್ಳಿ ಗ್ರಾಮದ ಮಹೇಂದ್ರ ರವರ ಮಗ ಆತನ ಹೆಸರು ಮರೆತು ಹೋಗಿದ್ದು ಆತನ ಮೇಲೆ ಹಾಗೂ ಹರೀಶ ಎಂಬವರ ಮೇಲೆ ಹಲ್ಲೆ ಮಾಡಿದ್ದು ಆ ಸಮಯದಲ್ಲಿ ಮನೆಯಲ್ಲಿದ್ದ ನನ್ನ ತಾಯಿ ಪುಟ್ಟಮ್ಮ ಆರೋಪಿಯನ್ನು ಏಕೆ ಹಲ್ಲೆ ಮಾಡುತ್ತೀಯಾ ಎಂದು ಪ್ರಶ್ನಿಸಿದಾಗ ಆಕೆಯ ಎಡ ಮುಂಗೈ ಮೇಲೆ ಹಲ್ಲೆ ಮಾಡಿ ಆಕೆಯ ಕೈ ಹಿಡಿದು ತಳ್ಳಿದ್ದು, ಆ ಪರಿಣಾಮ ಆಕೆ ನೆಲಕ್ಕೆ ಬಿದ್ದಿದ್ದು, ಆ ಸಮಯದಲ್ಲಿ ಅಲ್ಲಿದ್ದವರು ಘಟನೆಯನ್ನು ನೋಡಿ ಘಟನೆಯನ್ನು ಸಮಾಧಾನ ಮಾಡಿದ್ದು ಆ ದಿನದಂದು ನಾನು ರಾಮನಗರದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಅಭಿಯೋಜಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಕಾರಣ ನನಗೆ ವಿಷಯವನ್ನು ದೂರವಾಣಿ ಮೂಲಕ ತಿಳಿಸಿದ್ದು ನಾನು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಬಂದು ನೋಡಲಾಗಿ ನನ್ನ ತಾಯಿಯ ಎಡ ಮುಂಗೈ ಮೂಳೆ ಮುರಿದಿತ್ತು ಮತ್ತು ಬೆನ್ನಿನ 2 ಮೂಳೆಗಳು ಮುರಿದಿದೆ ಎಂದು ವೈದ್ಯಾಧಿಕಾರಿಗಳು ನನಗೆ ತಿಳಿಸಿದರು. ಅವರ ಸಲಹೆ ಮೇರೆಗೆ ನನ್ನ ತಾಯಿಯನ್ನು ಮೈಸೂರಿನ ಅಗಸ್ತ್ಯ ಆಸ್ಪತ್ರಗೆ ಕರೆದುಕೊಂಡು ಹೋಗಿ ಶಸ್ತ್ರ ಚಿಕಿತ್ಸೆ ಹಾಗೂ ಅಗತ್ಯ ಚಿಕಿತ್ಸೆ ಕೊಡಿಸಿದೆನು.

6. ನಂತರ ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ ಅಲ್ಲಿದ್ದ ವ್ಯಕ್ತಿಗಳು ಹಾಗೂ ಕೂಲಿ ಆಳುಗಳು ಘಟನೆಯನ್ನು ನನಗೆ ತಿಳಿಸಿದರು. ಆಸ್ಪತ್ರೆಯಲ್ಲಿ ನನ್ನ ತಾಯಿಯನ್ನು ವಿಚಾರಿಸಿದಾಗ ಮೇಲೆ ಹೇಳಿದ ವಿಚಾರಗಳನ್ನು ಅವರು ನನಗೆ ತಿಳಿಸಿದರು.

7. ನಾನು ಬರುವಷ್ಟರಲ್ಲಿ ಪೊಲೀಸರು ಆಸ್ಪತ್ರೆಯಲ್ಲಿ ನನ್ನ ತಾಯಿಯ ಹೇಳಿಕೆಯನ್ನು ದಾಖಲು ಮಾಡಿದ್ದರು. ನಂತರ ಪೊಲೀರು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ.

<u>ಪಾಟೀ ಸವಾಲು ಆರೋಪಿತರ ವಕೀಲರಿಂದಃ</u>

1. ಸ.ನಂ.67/7 ನಿಮ್ಮ ಮಾಲೀಕತ್ವ ಮತ್ತು ಸ್ವಾಧೀನದಲ್ಲಿ ಇರುವ ಬಗ್ಗೆ ತನಿಖಾಧಿಕಾರಿಗಳು ನಿಮ್ಮನ್ನು ಕೇಳಿದ್ದರಾ ಎಂದರೆ, ಕೇಳಿದ್ದರು ಆ ಬಗ್ಗೆ ಅಗ್ರಿಮೆಂಟ್ ಕ್ರಯ ಕರಾರುಪತ್ರದ ನೋಟರೈಸ್ಡ್ ಪ್ರತಿಯನ್ನು ನೀಡಿದ್ದೇನೆ.

2. ಸ.ನಂ.67/7 ಯಾರ ಮಾಲೀಕತ್ವ ಮತ್ತು ಸ್ವಾಧೀನದಲ್ಲಿ ಇದೆ ಎಂದು ಸಂಬಂಧಪಟ್ಟ ಪಹಣಿಯಲ್ಲಿ ನಮೂದು ಇರುತ್ತದೆ ಎಂದರೆ, ನಿಜ.

3. ಸ.ನಂ.67/7 ಚಂದ್ರೇಗೌಡರ ಹೆಸರಿನಲ್ಲಿದೆ ಎಂದರೆ, ಈಗಲೂ ಸಹ ಅವರ ಹೆಸರಿನಲ್ಲಿದೆ.

4. ಸದರಿಯವರಿಂದ ನೀವು ಸ.ನಂ.67/7 ರ ಸ್ವಾಧೀನ ಪಡೆದ ಬಗ್ಗೆ ದಾಖಲೆ ಇದೆಯಾ ಎಂದರೆ ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಆ ರೀತಿ ನೀಡದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

5. ನಿಮ್ಮ ತಾಯಿಯವರನ್ನು ಆರೋಪಿಯ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಿಮ್ಮ ತಾಯಿ ಮಾಲಂಗಿ ಗ್ರಾಮದಲ್ಲಿ ಮೃತರಾಗಿರುತ್ತಾರೆ ಎಂದರೆ ಸರಿ.

6. ಅವರು ಆರೋಪಿಯ ಮನೆಯಲ್ಲಿ ಮೃತರಾಗಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರನ್ನು ಶವ ಸಂಸ್ಕಾರಕ್ಕೆ ಸಹ ನಾವು ಸೇರಿಸಿಲ್ಲ ಎಂದು ನುಡಿಯುತ್ತಾರೆ. ಅವರು ಭಾಗವಹಿಸಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

7. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಮಾಹಿತಿಯನ್ನು ನನಗೆ ನನ್ನ ತಾಯಿ ಹಾಗೂ ಸಾಕ್ಷಿದಾರರಾದ ಮಹೇಂದ್ರ, ಹರೀಶ ಹಾಗೂ ಇನ್ನೂ 2-3 ಜನ ಹೇಳಿರುತ್ತಾರೆ. ಅವರ ಹೆಸರು ಮರೆತು ಹೋಗಿದೆ.

8. ಆಸ್ತಿ ವಿಚಾರವಾಗಿ ನಿಮ್ಮ ಸಹೋದರರು ಹಾಗೂ ನಿಮ್ಮ ತಂದೆಯ ನಡುವೆ ಮೊದಲಿನಿಂದಲೂ ಭಿನ್ನಾಭಿಪ್ರಾಯ ಇತ್ತು ಎಂದರೆ, ಇರಲಿಲ್ಲ.

9. ಸ.ನಂ.67/7 ರ ಜಮೀನಿನಲ್ಲಿ ಶಿಥಿಲವಾಗಿದ್ದ ಬ್ಯಾರನ್ ಗಳನ್ನು ರಿಪೇರಿ ಮಾಡಿಸಿದ ಬಗ್ಗೆ ದಾಖಲೆಗಳನ್ನು ತನಿಖಾಧಿಕಾರಿಗಳಿಗೆ ನೀಡಿದ್ದೀರಾ ಎಂದರೆ, ಇಲ್ಲ.

10. ನನ್ನ ತಾಯಿಯವರಿಗೆ ಸದರಿ ಬ್ಯಾರನ್ ಗಳನ್ನು ಶುಚಿಗೊಳಿಸುವಂತೆ ನನ್ನ ತಾಯಿಗೆ ಹೇಳಿರಲಿಲ್ಲ.

11. ನೀವು ಹೇಳುವಂತೆ ಆರೋಪಿ ಯಾವುದೇ ಅತಿಕ್ರಮ ಪ್ರವೇಶ ಮಾಡಿಲ್ಲ ಗಲಾಟೆ ಮಾಡಿ ಯಾವುದೇ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ.

12. ನಿಮ್ಮ ತಾಯಿಗೆ ಆರೋಪಿ ಅವಾಚ್ಯವಾಗಿ ಬೈದಿಲ್ಲ ಹಾಗೂ ದೊಣ್ಣೆಯಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಾಯಿಯನ್ನು ಆರೋಪಿ ತಳ್ಳಿಲ್ಲ ಹಾಗೂ ಯಾವುದೇ ನೋವುಂಟು ಮಾಡಿಲ್ಲ ಎಂದರೆ ಸರಿಯಲ್ಲ. ಆ ರೀತಿ ನಿಮಗೆ ಯಾವುದೇ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

13. ಹರೀಶ ರವರಿಗೆ ಸೊಂಟಕ್ಕೆ ಹೊಡೆದಿದ್ದಾರೆ ಎಂದು ಪೊಲೀಸರಿಗೆ ಹೇಳಿಕೆ ನೀಡಿದ್ದೀರಾ ಎಂದರೆ, ಕೊಟ್ಟಿರಬಹುದು.

14. ನಾನು ಹರೀಶ ರವರಿಗೆ ನೋವಾಗಿದ್ದ ಬಗ್ಗೆ ನಾನು ಗಮನಿಸಿರಲಿಲ್ಲ. ಅವರು ಹೇಳಿದ್ದರು ಆದರೆ ನಾನು ಗಮನಿಸಿಲ್ಲ.

15. ಪಿರಿಯಾಪಟ್ಟಣ ಆಸ್ಪತ್ರೆಗೆ ಬಂದ ನಂತರ ನನ್ನ ತಾಯಿಗೆ ಏಟಾಗಿದ್ದ ಬಗ್ಗೆ ನಾನು ನೋಡಿದ್ದೆ, ನನ್ನ ತಾಯಿ ಹೇಳಿದ್ದರು ಹಾಗೂ ವೈದ್ಯರು ಹೇಳಿದ್ದರು. ನಿಮಗೆ ನಿಮ್ಮ ತಾಯಿಯೂ ಹೇಳಿಲ್ಲ ವೈದ್ಯರೂ ಹೇಳಿಲ್ಲ ಹಾಗೂ ನೀವೂ ಸಹ ನೋಡದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

16. ನಿಮ್ಮ ಹಾಗೂ ನಿಮ್ಮ ಸಹೋದರರ ನಡುವೆ ಆಸ್ತಿಯ ಬಗ್ಗೆ ಭಿನ್ನಾಭಿಪ್ರಾಯ ಇದ್ದ ಕಾರಣ ಆರೋಪಿ ಮೇಲೆ ಸುಳ್ಳು ಆರೋಪ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

17. ನಿಮಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

18. ದಿಃ 20.02.2019 ರಂದು ನೀವು ಹೇಳುವಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ.

19. ಆರೋಪಿಯೇ ತನ್ನ ತಾಯಿಯನ್ನು ಅವರ ಕೊನೆ ದಿನಗಳಲ್ಲಿ ಅವರ ಸೇವೆ ಮಾಡಿ ಅವರ ರಕ್ಷಣೆ ಅವರೇ ಮಾಡಿದ್ದು ನೀವು ಎಂದೂ ಸಹ ನಿಮ್ಮ ತಾಯಿಯನ್ನು ನೋಡಿಕೊಂಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

<u>ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>
<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ